**All India Radio: Bangalore**
**National Bulletin In Kannada**
**23.01.2025  07.35 a.m.**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**23.01.2025  07.35 a.m.**
**<><><><>**

ಮುಖ್ಯಾಂಶಗಳು

1. ಇಂದು ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ೧೨೮ ನೇ ಜನ್ಮದಿನ ; ಪರಾಕ್ರಮ ದಿನವಾಗಿ ಆಚರಣೆ
2. ಕರ್ನಾಟಕದ ಶಿವಮೊಗ್ಗಕ್ಕೆ ಕೇಂದ್ರ ಸಚಿವ ಡಾ. ಎಲ್ ಮುರುಗನ್ ಭೇಟಿ ; ಆಕಾಶವಾಣಿ ಕೇಂದ್ರದ ಸಾಮರ್ಥ್ಯ ಹೆಚ್ಚಳಕ್ಕೆ ಚಾಲನೆ
3. ೨೦೩೦ರ ವೇಳೆಗೆ ೧೦ ಸಾವಿರ ಜಿಐ ಟ್ಯಾಗ್‌ಗಳನ್ನು ಹೊಂದುವ ಗುರಿ - ಪಿಯೂಷ್ ಗೋಯಲ್
4. ಮಹಾಕುಂಭಮೇಳದ ರೈಲು ವ್ಯವಸ್ಥೆ ಸಿದ್ಧತೆ ಪರಿಶೀಲಿಸಿದ ಸಚಿವ ವಿ. ಸೋಮಣ್ಣ
5. ಮಹಿಳೆಯರ ಟಿ-೨೦ ಐಸಿಸಿ ವಿಶ್ವಕಪ್ ; ಭಾರತ ಇಂದು ಶ್ರೀಲಂಕಾ ಎದುರು ಸೆಣಸು

<><><><>

ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ೧೨೮ ನೇ ಜನ್ಮ ದಿನಾಚರಣೆಯನ್ನು ಇಂದು ಪರಾಕ್ರಮ ದಿನ ೨೦೨೫ ಅನ್ನಾಗಿ ಆಚರಿಸಲಾಗುತ್ತಿದೆ. ಸಂಸ್ಕೃತಿ ಸಚಿವಾಲಯವು ಮೂರು ದಿನಗಳ ಆಚರಣೆಯನ್ನು ಆಯೋಜಿಸುತ್ತಿದ್ದು, ನೇತಾಜಿಯವರ ಜನ್ಮಸ್ಥಳವಾದ ಒಡಿಶಾದ ಕಟಕ್‌ನಲ್ಲಿ ಕಾರ್ಯಕ್ರಮ ನಡೆಯಲಿದೆ. ಈ ಕಾರ್ಯಕ್ರಮವನ್ನು ಒಡಿಶಾದ ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಉದ್ಘಾಟಿಸಲಿದ್ದಾರೆ. ಈ ಸಂದರ್ಭದಲ್ಲಿ ಹಲವು ಗಣ್ಯರು ನೇತಾಜಿಗೆ ಗೌರವ ನಮನ ಸಲ್ಲಿಸಲಿದ್ದಾರೆ ಮತ್ತು ನೇತಾಜಿ ಜನಿಸಿದ ಮನೆಯಲ್ಲಿ ರಾಷ್ಟ್ರಧ್ವಜವನ್ನು ಹಾರಿಸಲಾಗುವುದು. ಅವರ ನಿವಾಸವನ್ನು ಈಗ ಸುಭಾಷ್ ಚಂದ್ರ ಬೋಸ್ ಸ್ಮರಣಾರ್ಥ ವಸ್ತುಸಂಗ್ರಹಾಲಯವಾಗಿ ಪರಿವರ್ತಿಸಲಾಗಿದೆ. ಬಾರಾಬತಿ ಕೋಟೆಯಲ್ಲಿ ಪರಾಕ್ರಮ್ ದಿನಾಚರಣೆಯು ಪ್ರಧಾನಿ ನರೇಂದ್ರ ಮೋದಿಯವರ ವೀಡಿಯೊ ಸಂದೇಶದೊಂದಿಗೆ ಆರಂಭವಾಗಲಿದೆ ಹಾಗೂ ನೇತಾಜಿಯವರ ಜೀವನ ಆಧರಿಸಿದ ಪುಸ್ತಕ, ಛಾಯಾಚಿತ್ರ ಮತ್ತು ವಸ್ತು ಪ್ರದರ್ಶನ ಒಳಗೊಂಡಿರುತ್ತದೆ. ಅವರ ಅಪರೂಪದ

ಛಾಯಾಚಿತ್ರಗಳು, ಪತ್ರಗಳು ಮತ್ತು ದಾಖಲೆಗಳನ್ನು ಪ್ರದರ್ಶಿಸುತ್ತದೆ. ಈ ಸಂದರ್ಭದಲ್ಲಿ ಶಿಲ್ಪಕಲೆ ಕಾರ್ಯಾಗಾರ ಮತ್ತು ಚಿತ್ರಕಲೆ ಸ್ಪರ್ಧೆ ಮತ್ತು ಕಾರ್ಯಾಗಾರ ಸಹ ಆಯೋಜಿಸಲಾಗಿದೆ. ಈ ಕುರಿತು ನಮ್ಮ ಪ್ರತಿನಿಧಿ ಆದರ್ಶ್ ಹೆಚ್ಚಿನ ವಿವರ ನೀಡಿದ್ದಾರೆ.

ಧ್ವನಿ : ಆದರ್ಶ್

ಕಾರ್ಯಕ್ರಮದಲ್ಲಿ ನೇತಾಜಿಯವರ ಪರಂಪರೆ ಗೌರವಿಸುವ ಮತ್ತು ಒಡಿಶಾದ ಶ್ರೀಮಂತ ಸಾಂಸ್ಕೃತಿಕ ಸಂಪ್ರದಾಯವನ್ನು ಎತ್ತಿ ತೋರಿಸುವ ಸಾಂಸ್ಕೃತಿಕ ಪ್ರದರ್ಶನಗಳು ನಡೆಯಲಿವೆ. ಈ ಸಂದರ್ಭದಲ್ಲಿ ನೇತಾಜಿ ಅವರ ಜೀವನದ ಕುರಿತಾದ ಚಲನಚಿತ್ರಗಳನ್ನು ಸಹ ಪ್ರದರ್ಶಿಸಲಾಗುವುದು.

<><><><>

ಕರ್ನಾಟಕದ ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಆಕಾಶವಾಣಿ ಕೇಂದ್ರದ ಸಾಮರ್ಥ್ಯ ಹೆಚ್ಚಿಸಲು ಕೇಂದ್ರ ಸರ್ಕಾರ ಮುಂದಾಗಿದ್ದು,  ಈಗ ಇರುವ ಮೀಡಿಯಂ ವೇವ್, ಫ್ರೀಕ್ವೆನ್ಸಿ ಮಾಡ್ಯುಲೇಷನ್ ಟ್ರಾನ್ಸ್ ಮಿಷನ್ ಗೆ ಅಂದರೆ ಎಫ್.ಎಂಗೆ ಬದಲಾಗುತ್ತಿದೆ. ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯ ೧೦ ಕೋಟಿ ಹಣ ವೆಚ್ಚದಲ್ಲಿ ೧೦ ಕಿಲೋ ವ್ಯಾಟ್ ಸಾಮರ್ಥ್ಯದ ಟ್ರಾನ್ಸ್‌ಮೀಟರ್ ಅಳವಡಿಸಲು ಮುಂದಾಗಿದೆ. ಈಗಾಗಲೇ ಕೆನಡಾದಿಂದ ೧೦ ಕಿಲೋವ್ಯಾಟ್ ಸಾಮರ್ಥ್ಯದ ಟ್ರಾನ್ಸ್ ಮೀಟರ್ ಶಿವಮೊಗ್ಗಕ್ಕೆ ಆಗಮಿಸಿದೆ. ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ: ಎಲ್ ಮುರುಗನ್ ಇಂದು ಶಿವಮೊಗ್ಗ ದೂರದರ್ಶನ ಕೇಂದ್ರದಲ್ಲಿ ಟ್ರಾನ್ಸ್‌ಮೀಟರ್‌ಗೆ ಪೂಜೆ ಸಲ್ಲಿಸಲಿದ್ದಾರೆ. ಬಳಿಕ ಅವರು, ಶಿವಮೊಗ್ಗದಲ್ಲಿ ಸಂವಿಧಾನ್ ಗೌರವ್ ಅಭಿಯಾನದಲ್ಲಿ ಪಾಲ್ಗೊಳ್ಳಲಿದ್ದಾರೆ.

<><><><>

೨೦೩೦ರ ವೇಳೆಗೆ ೧೦ ಸಾವಿರ ಜಿಯೋಗ್ರಾಫಿಕಲ್ ಇಂಡಿಕೇಷನ್-ಜಿಐ ಟ್ಯಾಗ್‌ಗಳನ್ನು ತಲುಪುವ ಗುರಿ ಹೊಂದಲಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹೇಳಿದ್ದಾರೆ. ನವದೆಹಲಿಯಲ್ಲಿ ನಡೆದ ಜಿಐ ಸಮಾವೇಶ ಉದ್ದೇಶಿಸಿ ಮಾತನಾಡಿದ ಅವರು ಈ ಗುರಿಯನ್ನು ಸಂಪೂರ್ಣ ಸರ್ಕಾರಿ ವಿಧಾನದ ಮೂಲಕ ಸಾಧಿಸಲಾಗುವುದು ಮತ್ತು ಸರ್ಕಾರವು ಇದನ್ನು ಮೇಲ್ವಿಚಾರಣೆ ಮಾಡಲು ಒಂದು ಸಮಿತಿಯನ್ನು ರಚಿಸಲಿದೆ ಎಂದರು. ಈವರೆಗೆ ೬೦೫ ಜಿಐ ಟ್ಯಾಗ್‌ಗಳಿಗೆ ಅನುಮತಿ ನೀಡಲಾಗಿದೆ. ಬೌದ್ಧಿಕ ಆಸ್ತಿ ಪೂರಕ ವ್ಯವಸ್ಥೆಗೆ ಒತ್ತು ನೀಡಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಪ್ರಯತ್ನಗಳನ್ನು ಅವರು ವಿವರಿಸಿದರು. ಕಳೆದ ೧೦

ವರ್ಷಗಳಲ್ಲಿ ಜಿಐ ಟ್ಯಾಗ್‌ಗಳಿಗೆ ಅಧಿಕೃತ ಬಳಕೆದಾರರ ಸಂಖ್ಯೆ ೩೬೫ ರಿಂದ ೨೯ ಸಾವಿರಕ್ಕೆ ಮತ್ತು ನೀಡಲಾದ ಪೇಟೆಂಟ್‌ಗಳ ಸಂಖ್ಯೆ ೬೦೦೦ ದಿಂದ ಒಂದು ಲಕ್ಷಕ್ಕೆ ಏರಿದೆ ಎಂದರು. ಐಪಿಆರ್ ಪರಿಸರ ವ್ಯವಸ್ಥೆಯನ್ನು ಬಲಪಡಿಸಲು ಸರ್ಕಾರ ಮಾಡುತ್ತಿರುವ ಪ್ರಯತ್ನಗಳ ಕುರಿತು ಮಾತನಾಡಿದ ಸಚಿವರು, ಅನುಸಂಧಾನ ರಾಷ್ಟ್ರೀಯ ಸಂಶೋಧನಾ ಪ್ರತಿಷ್ಠಾನ ನಿಧಿ ಮತ್ತು ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಯನ್ನು ಉಲ್ಲೇಖಿಸಿದರು.

<><><><>

ಕೇಂದ್ರ ರೈಲ್ವೆ ಮತ್ತು ಜಲಶಕ್ತಿ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ನಿನ್ನೆ ಪ್ರಯಾಗರಾಜ್ ಜಂಕ್ಷನ್ ನಿಲ್ದಾಣದಲ್ಲಿ ೨೦೨೫ರ ಮಹಾಕುಂಭದ ಸಿದ್ಧತೆಗಳನ್ನು ಪರಿಶೀಲಿಸಿದರು. ಈ ಸಂದರ್ಭದಲ್ಲಿ ಅವರು ಯಾತ್ರಿಕರ ಆಶ್ರಮದಲ್ಲಿ ಭಕ್ತರೊಂದಿಗೆ ಸಂವಾದ ನಡೆಸಿದರು ಮತ್ತು ಭಕ್ತರಿಗೆ ಮಾಹಿತಿಯನ್ನು ಒದಗಿಸಲು ೨೨ ಭಾಷೆಗಳಲ್ಲಿ ಸಿದ್ಧಪಡಿಸಿದ ಕರಪತ್ರಗಳನ್ನು ಹಂಚಿದರು.  ನಂತರ ಮಾಧ್ಯಮ ಪ್ರತಿನಿಧಿಗಳನ್ನುದ್ದೇಶಿಸಿ ಮಾತನಾಡಿದ ಅವರು, ಮೌನಿ ಅಮಾವಾಸ್ಯೆಯ ದಿನದಂದು ೧೫೦ ಕ್ಕೂ ಅಧಿಕ ವಿಶೇಷ ರೈಲುಗಳನ್ನು ಓಡಿಸುವ ಯೋಜನೆ ಇದೆ ಮತ್ತು ಮೌನಿ ಅಮಾವಾಸ್ಯೆಯ ಮೊದಲ ದಿನದಿಂದ ಎರಡು ದಿನಗಳವರೆಗೆ ಒಟ್ಟು ೪೦೦ ಕ್ಕೂ ಅಧಿಕ ವಿಶೇಷ ರೈಲುಗಳನ್ನು ಸಂಚಾರ ಕೈಗೊಳ್ಳಲಾಗುವುದು. ಪ್ರಯಾಣಿಕರ ಅನುಕೂಲಕ್ಕಾಗಿ, ಕುಂಭ ವಿಶೇಷ ರೈಲುಗಳನ್ನು ಓಡಿಸಲು ಸುಮಾರು ೨೦೦ ಬೋಗಿಗಳನ್ನು ಲಭ್ಯವಾಗುವಂತೆ ಮಾಡಲಾಗಿದೆ. ಮಹಾಕುಂಭ-೨೦೨೫ ರ ಸಮಯದಲ್ಲಿ ಉತ್ತಮ ವ್ಯವಸ್ಥೆಗಳಿಗಾಗಿ ಇತರ ವಲಯ ರೈಲ್ವೆಗಳಿಂದ ೧೦ ಸಾವಿರಕ್ಕೂ ಅಧಿಕ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಮತ್ತು ಸುಮಾರು ೧೦ ಸಾವಿರ ರಾಜ್ಯ ರೈಲ್ವೆ ಪೊಲೀಸರು ಮತ್ತು ರೈಲ್ವೆ ರಕ್ಷಣಾ ಪಡೆ ಸಿಬ್ಬಂದಿಯನ್ನು ನಿಲ್ದಾಣಗಳಲ್ಲಿ ನಿಯೋಜಿಸಲಾಗಿದೆ ಎಂದು ವಿ. ಸೋಮಣ್ಣ ಹೇಳಿದರು.

<><><><>

ಪೂರ್ಣ ಧಿರಿಸಿನೊಂದಿಗೆ ಗಣರಾಜ್ಯೋತ್ಸವದ ಪಥಸಂಚಲನದ ಪೂರ್ವಭಾವಿ ತಾಲೀಮು ಇಂದು ರಾಜಧಾನಿ ದೆಹಲಿಯ ಕರ್ತವ್ಯ ಪಥದಲ್ಲಿ ನಡೆಯಲಿದೆ. ಪಥಸಂಚಲನದ ತಾಲೀಮು ಬೆಳಿಗ್ಗೆ ೧೦:೩೦ ಕ್ಕೆ ವಿಜಯ್ ಚೌಕ್‌ನಿಂದ ಆರಂಭವಾಗಿ ಕೆಂಪು ಕೋಟೆವರೆಗೆ ಮುಂದುವರಿಯಲಿದೆ. ಪೂರ್ವಾಭ್ಯಾಸದ ಸಮಯದಲ್ಲಿ, ಟಿ೯೦ ಟ್ಯಾಂಕ್, ನಾಗ್ ಕ್ಷಿಪಣಿ ವ್ಯವಸ್ಥೆ ಮತ್ತು ಪಿನಾಕಾ ರಾಕೆಟ್ ವ್ಯವಸ್ಥೆಯು ದೇಶದ ಮಿಲಿಟರಿ ಶಕ್ತಿಯನ್ನು ಪ್ರದರ್ಶಿಸುತ್ತದೆ. ಅಲ್ಲದೆ, ವಿವಿಧ ರಾಜ್ಯಗಳ ಸಶಸ್ತ್ರ

ಪಡೆಗಳ ವಿವಿಧ ಪಥಸಂಚಲನ ತುಕಡಿಗಳು ಮತ್ತು ಸ್ಥಬ್ಧ ಚಿತ್ರಗಳು ವೈವಿಧ್ಯಮಯ ಸಾಮರ್ಥ್ಯಗಳು ಮತ್ತು ಸಾಂಸ್ಕೃತಿಕ ಒಳಗೊಳ್ಳುವಿಕೆಯ ನೋಟವನ್ನು ಪ್ರಸ್ತುತಪಡಿಸುತ್ತವೆ. ಭಾರತೀಯ ವಾಯುಪಡೆಯ ವಿವಿಧ ಯುದ್ಧ ಹೆಲಿಕಾಪ್ಟರ್‌ಗಳು ಮತ್ತು ವಿಮಾನಗಳು ತಮ್ಮ ಸಾಮರ್ಥ್ಯವನ್ನು ಪ್ರದರ್ಶಿಸಲಿವೆ. ಪಥಸಂಚಲನವು ವಿಜಯ್ ಚೌಕ್‌ನಿಂದ ಆರಂಭವಾಗಿ ಕರ್ತವ್ಯ ಪಥ, ಸಿ-ಹೆಕ್ಸಾಗನ್, ನೇತಾಜಿ ಸುಭಾಷ್ ಚಂದ್ರ ಬೋಸ್ ಪ್ರತಿಮೆ, ತಿಲಕ್ ಮಾರ್ಗ, ಬಹದ್ದೂರ್ ಶಾ ಜಾಫರ್ ಮಾರ್ಗ ಮತ್ತು ನೇತಾಜಿ ಸುಭಾಷ್ ಮಾರ್ಗದ ಮೂಲಕ ಕೆಂಪುಕೋಟೆ ತಲುಪಲಿದೆ. ಸಂಚಾರ ದಟ್ಟಣೆಯನ್ನು ತಪ್ಪಿಸಲು ಈ ಮಾರ್ಗಗಳಲ್ಲಿ ಪ್ರಯಾಣಿಸದಂತೆ ಸಂಚಾರ ಪೊಲೀಸರು ಜನರಿಗೆ ಸೂಚಿಸಿದ್ದಾರೆ.

<><><>

ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ತನ್ನ ಸೋಲು ಮನಗಂಡಿರುವ ಆಮ್ ಆದ್ಮಿ ಪಕ್ಷ ಪ್ರತಿದಿನ ಒಂದೊಂದು ಘೋಷಣೆಗಳನ್ನು ಮಾಡುತ್ತಿದೆ ಎಂದು ಬಿಜೆಪಿಯ ಹಿರಿಯ ನಾಯಕ ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿ ಆರೋಪಿಸಿದ್ದಾರೆ. ಅವರು, ರಾಜಧಾನಿ ದೆಹಲಿಯಲ್ಲಿ ಕಳೆದ ರಾತ್ರಿ ನಮೋ ಆಪ್ ಮೂಲಕ ಪಕ್ಷದ ಬೂತ್‌ಮಟ್ಟದ ಕಾರ್ಯಕರ್ತರ ಜೊತೆ ಸಂವಾದ ನಡೆಸಿ, ಆಮ್ ಆದ್ಮಿ ಪಕ್ಷ ಜನರಿಗೆ ಮೂಲ ಅಗತ್ಯತೆಯಾದ ನೀರನ್ನು ಪೂರೈಸುವಲ್ಲಿ ವಿಫಲವಾಗಿದ್ದು, ಟ್ಯಾಂಕರ್ ಮಾಫಿಯಾ ತಲೆ ಎತ್ತಿದೆ ಎಂದರು.

ಧ್ವನಿ : ಪ್ರಧಾನ ಮಂತ್ರಿ ನರೇಂದ್ರ ಮೋದಿ

<><><>

೭೬ನೇ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ವಿವಿಧ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಮತ್ತು ಕೇಂದ್ರ ಸಚಿವಾಲಯಗಳ ಒಟ್ಟು ೨೬ ಸ್ಥಬ್ಧಚಿತ್ರಗಳು ದೇಶದ ವೈವಿಧ್ಯತೆ ಮತ್ತು ಸಾಂಸ್ಕೃತಿಕ ಒಳಗೊಳ್ಳುವಿಕೆಯನ್ನು ಪ್ರಸ್ತುತಪಡಿಸಲಿವೆ. 'ಸ್ವರ್ಣಿಮ ಭಾರತ: ವಿರಾಸತ್ ಔರ್ ವಿಕಾಸ್' ಎಂಬ ಘೋಷವಾಕ್ಯವನ್ನು ಸ್ಥಬ್ಧಚಿತ್ರಗಳು ಆಧರಿಸಿವೆ. ಪಥಸಂಚಲನದಲ್ಲಿ ೧೬ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸ್ಥಬ್ಧಚಿತ್ರಗಳು, ಜೊತೆಗೆ ೧೦ ಸಚಿವಾಲಯಗಳು ಮತ್ತು ಇಲಾಖೆಗಳು, ಪ್ರತಿಯೊಂದೂ ತನ್ನದೇ ಆದ ವಿಶಿಷ್ಟ ವಿಷಯವನ್ನು ಹೊಂದಿವೆ. ಈ ಸ್ಥಬ್ಧಚಿತ್ರಗಳು ಭಾರತದ ವೈವಿಧ್ಯಮಯ ಸಾಮರ್ಥ್ಯಗಳನ್ನು ಪ್ರದರ್ಶಿಸುತ್ತವೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ. ಈ ವರ್ಷದ ಪಥಸಂಚಲನದ ವಿಶಿಷ್ಟ ವೈಶಿಷ್ಟ್ಯವೆಂದರೆ 'ಸಶಕ್ತ ಮತ್ತು ಸುರಕ್ಷಿತ ಭಾರತ' ಎಂಬ ಧ್ಯೇಯದೊಂದಿಗೆ ಸ್ಥಬ್ಧಚಿತ್ರ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಭಾಗವಹಿಸುತ್ತದೆ. ಕರ್ನಾಟಕದ

ಸ್ಥಬ್ಧಚಿತ್ರ ಲಕ್ಕುಂಡಿಯ ಶಿಲ್ಪಕಲೆಯನ್ನು ಬಿಂಬಿಸಲಿದೆ. ಆಕಾಶವಾಣಿಯೊಂದಿಗೆ ಮಾತನಾಡಿದ ರಕ್ಷಣಾ ಸಿಬ್ಬಂದಿಯ ಏರ್ ಕಮಾಂಡರ್ ಮನೀಶ್ ಸಭರ್ವಾಲ್, ಸಶಸ್ತ್ರ ಪಡೆಗಳಲ್ಲಿ ಜಂಟಿ ಮತ್ತು ಏಕೀಕರಣದ ಪರಿಕಲ್ಪನಾ ದೃಷ್ಟಿಕೋನವನ್ನು ಪ್ರದರ್ಶಿಸುತ್ತದೆ, ರಾಷ್ಟ್ರೀಯ ಭದ್ರತೆ ಮತ್ತು ಕಾರ್ಯಾಚರಣೆಯ ಶ್ರೇಷ್ಠತೆಯನ್ನು ಖಚಿತಪಡಿಸುತ್ತದೆ ಎಂದು ಹೇಳಿದರು.

<><><><>

ಐಸಿಸಿ ವಿಶ್ವಕಪ್ ೧೯ ವರ್ಷದೊಳಗಿನವರ ಮಹಿಳೆಯರ ಟಿ-೨೦ ಪಂದ್ಯಾವಳಿಯಲ್ಲಿ ಹಾಲಿ ಚಾಂಪಿಯನ್ ಭಾರತ ಇಂದು ಶ್ರೀಲಂಕಾ ಎದುರು ಸೆಣಸಲಿದೆ. ಕೌಲಲಾಂಪುರದಲ್ಲಿ ಇಂದು ಮಧ್ಯಾಹ್ನ ಪಂದ್ಯ ನಡೆಯಲಿದೆ. ಭಾರತ ಕಳೆದ ಭಾನುವಾರ ನಡೆದ ಮೊದಲ ಪಂದ್ಯದಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ೯ ವಿಕೆಟ್‌ಗಳ ಗೆಲುವು ಸಾಧಿಸಿತ್ತು. ನಂತರ ೨ನೇ ಪಂದ್ಯದಲ್ಲಿ ಮಲೇಷ್ಯಾ ವಿರುದ್ಧ ೧೦ ವಿಕೆಟ್‌ಗಳ ಭರ್ಜರಿ ಗೆಲುವು ಸಾಧಿಸಿ, ಎ ಗುಂಪಿನಲ್ಲಿ ಅಗ್ರ ಸ್ಥಾನದಲ್ಲಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>